## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:11/06/2008 ರ ನಡವಳಿಗಳು

**ವಿಷಯ ಸಂಖ್ಯೆ:210/2008–09**

Providing Chain Link fencing to Primary and Secondary drain in Challaghatta Valley Package-1 ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಬೃಹತ್ ನೀರುಗಾಲುವೆ ಅಕ್ಕಪಕ್ಕದ ಜಾಗದಲ್ಲಿ ಒತ್ತುವರಿಯನ್ನು ತಡೆಯಲು ಮತ್ತು ನೀರುಗಾಲುವೆಗಳಿಗೆ ಕಸಕಡ್ಡಿ ಮುಂತಾದವುಗಳನ್ನು ತುಂಬುವುದನ್ನು ತಡೆಗಟ್ಟಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಮಾನ್ಯ ಆಯುಕ್ತರು ಆದೇಶಿಸಿರುತ್ತಾರೆ.

ಇದರನ್ವಯ ಮುಖ್ಯ ಅಭಿಯಂತರರು (ಬೃಹತ್ ನೀರುಗಾಲುವೆ) ರವರ ಆದೇಶದಂತೆ 2007–08ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ರೂ.67,36,500 ಗಳಿಗೆ ದರಗಳಂತೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು,ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ನಿರೀಕ್ಷಿಸಿ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ.

ಸದರಿ ಕಾಮಗಾರಿಯ ಟೆಂಡರ್‌ಗೆ ಮೂರು ಜನ ಗುತ್ತಿಗೆದಾರರು ಭಾಗವಹಿಸಿದ್ದು, ಸದರಿಯವರ ತಾಂತ್ರಿಕ ಬಿಡ್ಡುಗಳನ್ನು ಪರಿಶೀಲಿಸಲಾಗಿ ತಾಂತ್ರಿಕ ಬಿಡ್ಡ್‌ನಲ್ಲಿ ಶ್ರೀ.ಸಿ.ಎನ್.ಎಸ್.ಮೂರ್ತಿ ಹಾಗೂ ಶ್ರೀ.ಪಿ.ವೆಂಕಟೇಶ್ವರರಾವ್ ಗುತ್ತಿಗೆದಾರರು ಅರ್ಹರಾಗಿದ್ದು, ಇವರುಗಳ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗಿ ವಿವರಗಳು ಕೆಳಕಂಡತಿವೆ.

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಟೆಂಡರಿಗೆ ಇಟ್ಟಿರುವ ಮೊತ್ತ ರೂ.ಗಳಲ್ಲಿ | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ.ಗಳಲ್ಲಿ | ಟೆಂಡರ್ ಮೊತ್ತಕ್ಕೆ (2007–08ನೇ ಸಾಲಿನ ದರ ಪಟ್ಟಿಗೆ) ಹೋಲಿಸಿದಾಗ |
|---|---|---|---|---|
| 1 | ಶ್ರೀ.ಸಿ.ಎನ್.ಎಸ್.ಮೂರ್ತಿ | 67,36,234.30 | 75,31,448.15 | 11.80% ಹೆಚ್ಚುವರಿ |
| 2 | ಶ್ರೀ.ಪಿ.ವೆಂಕಟೇಶ್ವರ ರಾವ್ | 67,36,234.30 | 76,62,089.46 | 13.74% ಹೆಚ್ಚುವರಿ |

ಶ್ರೀ.ಸಿ.ಎನ್.ಎಸ್.ಮೂರ್ತಿ, ಗುತ್ತಿಗೆದಾರರು ರೂ.75,31,448.15 ಗಳನ್ನು ನಮೂದಿಸಿದ್ದು, ಟೆಂಡರ್ ಮೊತ್ತ ರೂ.67,36,234.30 (2007–08 ನೇ ಸಾಲಿನ ದರಪಟ್ಟಿ) ಹೋಲಿಸಿ ತುಲನೆ ಮಾಡಿದಾಗ ಶೇಕಡ:11.80% ರಷ್ಟು ಹೆಚ್ಚುವರಿಯಾಗಿರುತ್ತದೆ. 2008–09ನೇ ಸಾಲಿನ ದರಪಟ್ಟಿಗೆ (ಪರಿಷ್ಕೃತ ಉಕ್ಕು ಮತ್ತು ಸಿಮೆಂಟ್ ದರಗಳಿಗೆ) ಹೋಲಿಸಿ ತುಲನೆ ಮಾಡಿದಾಗ ಶೇ.4.96 ರಷ್ಟು ಕಡಿಮೆಯಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕೆಳಕಂಡಂತೆ ಅನುಮೋದನೆ ಕೋರಿದೆ.

1) ಕಾಮಗಾರಿಯ ಅಂದಾಜು ಮೊತ್ತ ರೂ.67,36,500.00 ಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಕೋರಿದ್ದು, ಈ ಕಾಮಗಾರಿಗೆ ತಗಲುವ ವೆಚ್ಚವನ್ನು ಈಗಾಗಲೇ JNNURM ಅಡಿಯಲ್ಲಿ ಮಂಜೂರಾಗಿರುವ ಚಲ್ಲಘಟ್ಟ ಕಣಿವೆ ಪ್ಯಾಕೇಜ್ – I ರ ಅಡಿಯಲ್ಲಿ ಉಳಿತಾಯವಾಗುವ ಹಣದಿಂದ ಭರಿಸಲು.
2) ಈಗಾಗಲೇ ಮಂಜೂರಾತಿ ನಿರೀಕ್ಷಿಸಿ ಕಾಮಗಾರಿಗೆ ಟೆಂಡರ್ ಆಹ್ವಾನಿಸಿರುವ ಕ್ರಮವನ್ನು ಸ್ಥಿರೀಕರಣಗೊಳಿಸಲು.
3) ಶ್ರೀ.ಸಿ.ಎನ್.ಎಸ್.ಮೂರ್ತಿ ಗುತ್ತಿಗೆದಾರರು ಸದರಿ ಕಾಮಗಾರಿಗೆ ನಮೂದಿಸಿರುವ ಮೊತ್ತ ರೂ.75,31,448.15 ಗಳಿಗೆ ಅನುಮೋದನೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:29/05/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:29/05/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:11/06/2008 ರ ನಡವಳಿಗಳು**

ವಿಷಯ ಸಂಖ್ಯೆ:211/2008–09

ದಾಸರಹಳ್ಳಿ ವಲಯಕ್ಕೆ ಸಂಬಂಧಪಟ್ಟಂತೆ 2007–08 ನೇ ಸಾಲಿಗೆ ಕಲ್ಯಾಣ ಕಾರ್ಯಕ್ರಮದ ವಿವಿಧ ಸೌಲಭ್ಯಗಳಿಗಾಗಿ ಆಯ್ಕೆಯಾಗಿರುವ ಅರ್ಹ ಅಭ್ಯರ್ಥಿಗಳ ಪಟ್ಟಿಯ ಮತ್ತು ಅನುಷ್ಠಾನದ ಅನುಮೋದನೆ ಬಗ್ಗೆ.

ಪ್ರಸ್ತಾವನೆ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಲಯ ವ್ಯಾಪ್ತಿಯ ನಗರ ನಿವಾಸಿ ಬಡವರ ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಾಸಂಖ್ಯಾತ ವರ್ಗ ಮತ್ತು ಮಹಿಳೆಯರ ಕಲ್ಯಾಣಕ್ಕಾಗಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಕಲ್ಯಾಣ ಇಲಾಖೆ, ಸಂಸ್ಕೃತಿ ಮತ್ತು ಕ್ರೀಡಾ ಇಲಾಖೆ, ಶಿಕ್ಷಣ ಇಲಾಖೆಗಳ ದಾಸರಹಳ್ಳಿ ವಲಯಕ್ಕೆ 2007–08 ನೇ ಸಾಲಿನ ಆಯವ್ಯಯದಲ್ಲಿ ಅನುದಾನ ನಿಗದಿಗೊಳಿಸಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿವೆ.

| ವಿವರಗಳು | ಅನುದಾನದ ಮೊತ್ತ ರೂ. ಲಕ್ಷಗಳಲ್ಲಿ |
|---|---|
| ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವರ್ಗದವರಿಗೆ | 242.13 |
| ಹಿಂದುಳಿದ ವರ್ಗ ಮತ್ತು ಅಲ್ಪಾಸಂಖ್ಯಾತರಿಗೆ | 123.125 |
| ಸಂಸ್ಕೃತಿ ಮತ್ತು ಕ್ರೀಡಾ ಇಲಾಖೆ | 142.375 |
| ಮಹಿಳಾ ಕಲ್ಯಾಣ ಕಾರ್ಯಕ್ರಮಕ್ಕೆ | 8.525 |
| ಶಿಕ್ಷಣಕ್ಕೆ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಹೆಚ್ಚು ಇರುವ ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ | 100.00 |

ಅನುದಾನಕ್ಕೆ ಅನುಗುಣವಾಗಿ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆ ತಯಾರಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದ ಕಾರ್ಯಕ್ರಮಗಳು ಹಾಗೂ ತತ್ಸಂಬಂಧ ಆಯ್ಕೆಯಾಗಿರುವ ಅಭ್ಯರ್ಥಿಗಳ ವಿವರ ಈ ಕೆಳಕಂಡಂತೆ ಇದೆ.

| ಕ್ರ. ಸಂ. | ಕಲ್ಯಾಣ ಕಾರ್ಯಕ್ರಮಗಳ ವಿವರ | ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆ | | | | | | | | |
|---|---|---|---|---|---|---|---|---|---|---|
| | | ಹಿಂ.ಜಾತಿ | | ಪ.ಪಂಗಡ | | ಹಿ.ವರ್ಗ | | ಅ.ಸಂ | | ಒಟ್ಟು |
| | | ಗಂ. | ಹೆ. | ಗಂ. | ಹೆ. | ಗಂ. | ಹೆ. | ಗಂ. | ಹೆ. | |
| 1 | ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಹಾಯ ಧನ | 99 | 33 | 63 | 13 | 12 | 02 | – | – | 222 |
| 2 | ಕಂಪ್ಯೂಟರ್ ಸಾಫ್ಟ್‌ವೇರ್ ತರಬೇತಿ | 58 | 76 | 36 | 27 | 04 | 02 | – | – | 203 |
| 3 | ಕಂಪ್ಯೂಟರ್ ಹಾರ್ಡ್‌ವೇರ್ ತರಬೇತಿ | 05 | 04 | 04 | 01 | 14 | – | – | – | 28 |
| 4 | ವಾಹನ ಚಾಲನಾ ತರಬೇತಿ | 177 | 50 | 69 | 04 | – | – | – | – | 300 |

. . . . 2

| | | | | | | | | | | |
|---|---|---|---|---|---|---|---|---|---|---|
| 5 | ಪಾಲಿಕೆಯಿಂದ ಆರ್ಥಿಕ ಸ್ವಾವಲಂಬನೆ ಯೋಜನೆ | 74 | 02 | 70 | 03 | 03 | 02 | – | – | 154 |
| 6 | ಸ್ವಯಂ ಉದ್ಯೋಗ ಕಾರ್ಯಕ್ರಮ (ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮ ಸಹಯೋಗದೊಂದಿಗೆ) | – | – | 63 | 151 | 03 | 05 | – | – | 222 |
| 7 | ಪ್ರತಿಭಾವಂತರಿಗೆ ಪ್ರೊಫೆಷನಲ್ ಕೋರ್ಸ್‌ಗಳಿಗೆ ಮತ್ತು ಉನ್ನತ ವ್ಯಾಸಂಗಕ್ಕೆ ಸಹಾಯ ಧನ | – | – | 04 | 02 | – | – | – | – | 06 |
| 8 | ಹೊಲಿಗೆ ತರಬೇತಿ | – | – | – | – | – | – | – | – | – |
| 9 | ಹಿರಿಯ ನಾಗರೀಕರಿಗ ಮಧ್ಯಾಹ್ನದ ಬಿಸಿಯೂಟ ಯೋಜನೆ | – | – | – | – | – | – | – | – | 1500 |
| 10 | ಆಟೋ ಚಾಲಕರಿಗೆ ಗುಂಪು ವಿಮೆ | – | – | – | – | – | – | – | – | – |
| 11 | ದೈಹಿಕ ಅಂಗವಿಕಲರಿಗೆ ಸಾಮಾಗ್ರಿಗಳ ಸರಬರಾಜು | 14 | 10 | – | – | – | – | – | – | 24 |
| 12 | ಬ್ಯೂಟಿಷಿಯನ್ ತರಬೇತಿ | – | 77 | – | 04 | 01 | – | – | – | 82 |
| 13 | ಸವಿತಾ ಸಮಾಜ | 100 | – | – | – | – | – | – | – | 100 |
| 14 | ಮೊಬೈಲ್ ರಿಪೇರಿ ತರಬೇತಿ | – | – | 82 | 40 | 20 | 02 | – | – | 147 |
| 15 | ದೋಭಿಗಳಿಗೆ ಇಸ್ತ್ರಿ ಪೆಟ್ಟಿಗೆ ಮತ್ತು ಕೈಗಾಡಿ ಸರಬರಾಜು | – | – | 20 | 07 | – | – | – | – | 27 |
| 16 | ಟಿ.ವಿ. ರಿಪೇರಿ ತರಬೇತಿ | – | – | 90 | 30 | 14 | 13 | – | – | 147 |
| 17 | ವಿದ್ಯುತ್ ವೈರ್ ರಿಪೇರಿ | – | – | 75 | 30 | 40 | 02 | – | – | 147 |
| 18 | ಒಂಟಿ ಮನೆ ನಿರ್ಮಾಣ | – | – | 12 | 14 | – | – | – | – | 26 |
| | | | | | | | ಒಟ್ಟು– | | | 3335 |

2007–08 ನೇ ಸಾಲಿನ ವಿವಿಧ ತರಬೇತಿ ನೀಡಲು ಪಾರದರ್ಶಕತೆ ನಿಯಮದಡಿ ಟೆಂಡರ್‌ನಲ್ಲಿ ಸಫಲರಾಗಿರುವ ಬಿಡ್ಡುದಾರರು/ ತರಬೇತಿ ಸಂಸ್ಥೆಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರಮ ಸಂಖ್ಯೆ | ತರಬೇತಿ ಒದಗಿಸಲಾಗುವ ವಿವರ | ತರಬೇತಿ ನೀಡಲು ಆಯ್ಕೆಯಾಗಿರುವ ಸಂಸ್ಥೆಗಳು |
|---|---|---|
| 1 | ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಹಾಯ ಧನ | ಮೆ॥ ಯುನಿವರ್ಸಲ್ ಕೋಚಿಂಗ್ ಸೆಂಟರ್, ಅತ್ತಿಗುಪ್ಪೆ, ಆರ್.ಪಿ.ಸಿ. ಲೇಔಟ್, ವಿಜಯನಗರ. |
| 2 | ವಾಹನ ಚಾಲನಾ ತರಬೇತಿ | ನ್ಯೂ ಇಂಡಿಯಾ ಮೋಟರ್ ಡ್ರೈವಿಂಗ್ ಸ್ಕೂಲ್, ಆರ್.ಟಿ.ನಗರ. ಬೆಂಗಳೂರು–32. |

| | | |
|---|---|---|
| 3 | 18% ರ ಯೋಜನೆ ಅಡಿ ಮೊಬೈಲ್ ತರಬೇತಿ | ಅಂಟ್ರಾಕ್ ಎಜುಕೇಷನ್ ವೆಲ್‌ಫೇರ್ ಅಸೋಷಿಯೇಷನ್, ಸುಬ್ರಮಣ್ಯ ನಗರ, ಬೆಂಗಳೂರು. |
| 4 | 18% ರ ಯೋಜನೆ ಅಡಿ ಟಿ.ವಿ. ರಿಪೇರಿ ತರಬೇತಿ | ಅಂಟ್ರಾಕ್ ಎಜುಕೇಷನ್ ವೆಲ್‌ಫೇರ್ ಅಸೋಷಿಯೇಷನ್, ಸುಬ್ರಮಣ್ಯ ನಗರ, ಬೆಂಗಳೂರು. |
| 5 | 18% ರ ಯೋಜನೆ ಅಡಿ ವಿದ್ಯುತ್ ವೈರ್ ರಿಪೇರಿ ತರಬೇತಿ | ಅಂಟ್ರಾಕ್ ಎಜುಕೇಷನ್ ವೆಲ್‌ಫೇರ್ ಅಸೋಷಿಯೇಷನ್, ಸುಬ್ರಮಣ್ಯ ನಗರ, ಬೆಂಗಳೂರು. |
| 6 | ಬ್ಯೂಟಿಷಿಯನ್ ತರಬೇತಿ | ಐಶ್ವರ್ಯ ಬ್ಯೂಟಿಷಿಯನ್ ತರಬೇತಿ ಕೇಂದ್ರ, ಸುಬ್ರಮಣ್ಯ ನಗರ, ಬೆಂಗಳೂರು. |
| 7 | 18% ರ ಯೋಜನೆ ಅಡಿ, ದೋಭಿಗಳಿಗೆ ಇಸ್ತ್ರಿ ಪೆಟ್ಟಿಗೆ ಮತ್ತು ಕೈಗಾಡಿ ಸರಬರಾಜು | ಮ್ಯಾಕ್ಸ್ ಟ್ರೇಡರ್, ಕೃಷ್ಣ ಬ್ಲಾಕ್ 2ನೇ ಮಹಡಿ, ಇಂಡಿಯನ್ ಬ್ಯಾಂಕ್ ಎದುರು, ಶೇಷಾದ್ರಿ ಪುರಂ. |
| 8 | ಸವಿತಾ ಸಮಾಜ ಸಲಕರಣೆ ವಿತರಣೆ | ಮ್ಯಾಕ್ಸ್ ಟ್ರೇಡರ್, ಕೃಷ್ಣ ಬ್ಲಾಕ್ 2ನೇ ಮಹಡಿ, ಇಂಡಿಯನ್ ಬ್ಯಾಂಕ್ ಎದುರು, ಶೇಷಾದ್ರಿ ಪುರಂ. |
| 9 | ದೈಹಿಕ ಅಂಗವಿಕಲರಿಗೆ ಸಾಮಾಗ್ರಿಗಳ ಸರಬರಾಜು | ಮ್ಯಾಕ್ಸ್ ಟ್ರೇಡರ್, ಕೃಷ್ಣ ಬ್ಲಾಕ್ 2ನೇ ಮಹಡಿ, ಇಂಡಿಯನ್ ಬ್ಯಾಂಕ್ ಎದುರು, ಶೇಷಾದ್ರಿ ಪುರಂ. |

ಮೇಲ್ಕಂಡಂತೆ ಒದಗಿಸಲಾಗಿರುವ ಅನುದಾನಕ್ಕೆ ಅನುಗುಣವಾಗಿ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, ನಿಗದಿತ ದಿನಾಂಕದೊಳಗೆ ಅವಶ್ಯಕ ದಾಖಲೆಗಳೊಂದಿಗೆ ಸಲ್ಲಿಸಲಾಗಿರುವ ಅರ್ಜಿಗಳನ್ನು ವಲಯ ಮಟ್ಟದ ಆಯ್ಕೆ ಸಮಿತಿಯು ಪರಿಶೀಲಿಸಿ, ವಿವಿಧ ಕಲ್ಯಾಣ ಕಾರ್ಯಕ್ರಮಗಳನ್ನು 2007–08ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:29/05/2008 ರ ಟಿಪ್ಪಣಿ.

ಶ್ರೀ [illegible] ಆಯುಕ್ತರವರ ದಿನಾಂಕ:29/05/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು.

# ಬೆಂಗಳೂರು ಮಹಾನಗರ ಪಾಲಿಕೆ



## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:11/06/2008 ರ ನಡವಳಿಗಳು

**ವಿಷಯ ಸಂಖ್ಯೆ:212/08-09**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನೌಕರರ ಕೇಂದ್ರಿಯ ಸಂಘದ ನೂತನ ಕಟ್ಟಡದ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನೌಕರರ ಕೇಂದ್ರಿಯ ಸಂಘದ ನೂತನ ಕಟ್ಟಡದ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ) ರವರು ಮೊದಲನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ) ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಸಿ.ಎನ್.ಎಸ್.ಮೂರ್ತಿ, ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.100.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007-08 ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ಮುಖ್ಯ ಅಭಿಯಂತರರು (ಯೋಜನೆ-1) ರವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು, ಟೆಂಡರ್‌ಗಿಟ್ಟ ಮೊಬಲಗು ರೂ.73,23,661.84 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಸಿ.ಎನ್.ಎಸ್.ಮೂರ್ತಿ ರವರು ಶೇಕಡ 35.59% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿ ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ) ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ ಗುತ್ತಿಗೆದಾರರು ಸಂಧಾನದ ನಂತರ ಶೇಕಡ 21.22% ರಷ್ಟು ಹೆಚ್ಚುವರಿ ದರಗಳು ಸಮರ್ಪಕವಾಗಿದ್ದು ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಂತೆ ಸಿಮೆಂಟ್ ಮತ್ತು ಸ್ಟೀಲ್ ವ್ಯತ್ಯಾಸದ ದರವನ್ನು ಪರಿಗಣಿಸಿ ಸಂಧಾನದ ನಂತರ ನಮೂದಿಸಿದ ದರಗಳಾದ ಶೇಕಡ 19.99% ರಷ್ಟು ಹೆಚ್ಚುವರಿ ದರಗಳನ್ನು ನೀಡಿದ್ದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಿದ್ಧನಿರುತ್ತೇನೆ ಎಂದು ಸಂಧಾನ ಪತ್ರ ನೀಡಿರುತ್ತಾರೆ. ಸದರಿ ಟೆಂಡರನ್ನು ಅನುಮೋದಿಸಲು ಅಧೀಕ್ಷಕ ಅಭಿಯಂತರರು (ಎಂಪಿಇಡಿ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶ ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.93,02,365.24 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ [illegible]/2002, ದಿನಾಂಕ:24/01/2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಮಗಾರಿ ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಯುಕ್ತರವರ/ಆಡಳಿತಗಾರರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಸಿ.ಎನ್.ಎಸ್.ಮೂರ್ತಿ ರವರು 2007-08 ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಸಂಧಾನದ ನಂತರ ನಮೂದಿಸಿದ ದರಗಳಿಗೆ ಸಿಮೆಂಟ್ ಮತ್ತು ಸ್ಟೀಲ್ ವ್ಯತ್ಯಾಸದ ದರಗಳನ್ನು ಪರಿಗಣಿಸಿ ಬಂದಂತಹ ಶೇಕಡ 19.99% ರಷ್ಟು ಹೆಚ್ಚುವರಿ ದರಗಳು ಅಥವಾ ರೂ.93,02,365.24 (ರೂ.ತೊಂಭತ್ತಾಮೂರು ಲಕ್ಷದ ಎರಡು ಸಾವಿರದ ಮೂನ್ನೂರ ಅರವತ್ತೈದು ಮತ್ತು ಪೈಸೆ ಇಪ್ಪತ್ತ ನಾಲ್ಕು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:05/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:05/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

## ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:11/06/2008 ರ ನಡವಳಿಗಳು

**ವಿಷಯದ ಸಂಖ್ಯೆ:219/2008-09**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ.93, ಮುನಿಮಾರಪ್ಪ ಬ್ಲಾಕ್-ಡಿ.ಜಿ.ಹಳ್ಳಿ ದೊಡ್ಡಣ್ಣ ನಗರ, 3ನೇ ಅಡ್ಡರಸ್ತೆ, ಸ.ನಂ.34/1ರ, ಆಸ್ತಿ ಸಂಖ್ಯೆ:7, 10 ರಿಂದ 19 ರವರೆಗಿನ ರಸ್ತೆಗಳ ಪೈಕಿ-18X104 ಅಡಿಗಳ ಜಾಗವನ್ನು ಸಾರ್ವಜನಿಕ ಸೌಲಭ್ಯಗಳಾದ ರಸ್ತೆ, ಒಳಚರಂಡಿ, ಇತರೆಗಳನ್ನು ನಿರ್ಮಿಸುವ ಸಂಬಂಧ, ಭೂ ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ.93, ಮುನಿಮಾರಪ್ಪ ಬ್ಲಾಕ್-ಡಿ.ಜಿ.ಹಳ್ಳಿ, ದೊಡ್ಡಣ್ಣ ನಗರ, 3ನೇ ಅಡ್ಡರಸ್ತೆ, ಸ.ನಂ.34/1ರ, ಆಸ್ತಿ ಸಂಖ್ಯೆ:7, 10 ರಿಂದ 19 ಗಳ ಪೈಕಿ, 1872 ಚದರ ಅಡಿ ಜಾಗವನ್ನು ಸಾರ್ವಜನಿಕ ಸೌಲಭ್ಯಗಳಿಗಾಗಿ ಈಗಾಗಲೇ ಉಪಯೋಗಿಸಲಾಗಿದ್ದು, ಇದನ್ನು ಭೂಸ್ವಾಧೀನ ಪಡಿಸಿಕೊಂಡು ಪರಿಹಾರ ನೀಡಲು ಟಿಪ್ಪಣಿ ಮಂಡಿಸಿದ್ದು, ಇದನ್ನು ಆಡಳಿತಗಾರರು ದಿನಾಂಕ:28/03/2008 ರಂದು ವಿಷಯದ ಸಂಖ್ಯೆ: 591/07-08 ರಲ್ಲಿ ಅನುಮೋದನೆ ನೀಡಿರುತ್ತಾರೆ.

ಆದರೆ, ವಾಸ್ತವವಾಗಿ ಭೂಸ್ವಾಧಿನಪಡಿಸಿಕೊಳ್ಳುವ ಜಾಗವು, ಆಸ್ತಿ ಸಂಖ್ಯೆ 7, 10 ರಿಂದ 19 ರವರೆಗೆ 1872 ಚದರ ಅಡಿ ವಿಸ್ತೀರ್ಣ ಬರುವುದರಿಂದ ಈಗಾಗಲೇ ಅನುಮೋದಿಸಲಾಗಿರುವ ದಿನಾಂಕ:28/03/2008 ರ ಆದೇಶಕ್ಕೆ ಕೆಳಕಂಡಂತೆ ತಿದ್ದುಪಡಿ ಕೋರಿದೆ.

| ಈಗಾಗಲೇ ಅನುಮೋದನೆ ಆಗಿರುವ ಆದೇಶದ ಪ್ರಕಾರ | ಈಗ ತಿದ್ದುಪಡಿ ಆದೇಶ ಮಾಡಬೇಕಾಗಿರುವ ಪ್ರಕಾರ |
|---|---|
| ಆಸ್ತಿ ಸಂಖ್ಯೆ 7,10,19 ರ ಪೈಕಿ<br>ಭಾಗಶ:18X104=1872 ಚದರ ಅಡಿ | ಆಸ್ತಿ ಸಂಖ್ಯೆ 7, 10 ರಿಂದ 19 ರವರೆಗೆ<br>ಭಾಗಶ: 18X104=1872 ಚದರ ಅಡಿ |

ಮೇಲ್ಕಂಡಂತೆ, ತಿದ್ದುಪಡಿ ಮಾಡುವ ಬಗ್ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಜಂಟಿ ಆಯುಕ್ತರು (ಆಸ್ತಿಗಳು) ರವರ ದಿನಾಂಕ:30/05/2008 ರ ಟಿಪ್ಪಣಿ.

**ತೀರ್ಮಾನ:** ಜಂಟಿ ಆಯುಕ್ತರು (ಆಸ್ತಿಗಳು) ರವರ ದಿನಾಂಕ:30/05/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ 275

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:11/06/2008 ರ ನಡವಳಿಗಳು**

**ವಿಷಯ ಸಂಖ್ಯೆ:134/2008-09**

Stengthening and low laying area of sadananda nagara and asphalting of road from NGEF entrance to railway under bridge (1st main road in ward No.84 ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Stengthening and low laying area of sadananda nagara and asphalting of road from NGEF entrance to railway under bridge (1st main road in ward No.84 ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಭಾರತಿನಗರ) ರವರು ಮೊದಲನೆ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ಭಾರತಿನಗರ) ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಕೆ.ಎನ್.ಶ್ರೀನಿವಾಸ್, ಗುತ್ತಿಗೆದಾರರ ಟೆಂಡರ್‌ನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.95.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007-08ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು, ಟೆಂಡರ್‌ಗಿಟ್ಟ ಮೊಬಲಗು ರೂ.29,38,859.70 ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಕೆ.ಎನ್.ಶ್ರೀನಿವಾಸ್, ರವರು ಶೇಕಡ 45.29% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ಭಾರತಿನಗರ) ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ ಗುತ್ತಿಗೆದಾರರು ಸಂಧಾನದ ನಂತರ ಶೇಕಡ 34.55% ರಷ್ಟು ಹೆಚ್ಚುವರಿ ದರಗಳು ಸಮರ್ಪಕವಾಗಿದ್ದು ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚಿಗೆ ಹೊರಡಿಸಿದ ಸುತ್ತೋಲೆಯಂತೆ ಸಿಮೆಂಟ್ ಮತ್ತು ಬಿಟುಮಿನ್ ವ್ಯತ್ಯಾಸದ ದರವನ್ನು ಪರಿಗಣಿಸಿ ನಮೂದಿಸಿದ ದರಗಳಾದ ಶೇಕಡ 14.50% ರಷ್ಟು ಹೆಚ್ಚುವರಿ ದರಗಳನ್ನು ನೀಡಿದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಿದ್ದನಿರುತ್ತೇನೆಂದು ಸಂಧಾನ ಪತ್ರ ನೀಡಿರುತ್ತಾರೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಪೂರ್ವ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶ ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.1,11,01,359.00 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ/106/ಎಕೆಬಿ/2002 ದಿನಾಂಕ: 24-01-2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಯುಕ್ತರು/ಆಡಳಿತಗಾರರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಕೆ.ಎನ್.ಶ್ರೀನಿವಾಸ್, ರವರು 2007-08ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ದರಗಳನ್ನು ಸಿಮೆಂಟ್ ಮತ್ತು ಡಾಂಬರಿನ ವ್ಯತ್ಯಾಸದ ದರಗಳನ್ನು ಪರಿಗಣಿಸಿ ಬಂದಂತಹ ಶೇಕಡ 14.50 ರಷ್ಟು ಹೆಚ್ಚುವರಿ ದರಗಳು ಅಥವಾ ರೂ.1,11,01,359.00 (ರೂ.ಒಂದು ಕೋಟಿ ಹನ್ನೊಂದು ಲಕ್ಷದ ಒಂದು ಸಾವಿರದ ಮೂರು ನೂರ ಐವತ್ತೊಂಭತ್ತು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:13/05/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:13/05/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

## ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:13/06/2008 ರ ನಡವಳಿಗಳು

**ವಿಷಯದ ಸಂಖ್ಯೆ:90/2008–09**

ಕಲ್ಯಾಣ ಶಾಖೆಯ ಕೇಂದ್ರ ಕಛೇರಿಯಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರಿಗೆ, ಮಹಿಳೆಯರಿಗೆ ಹಾಗೂ ಸಾಮಾನ್ಯ ವರ್ಗದವರಿಗೆ 2007–08ನೇ ಸಾಲಿನಲ್ಲಿ ವಿವಿಧ ಕಲ್ಯಾಣ ಕಾರ್ಯಕ್ರಮಗಳು ಹಾಗೂ ಯೋಜನೆಗಳನ್ನು ಹಮ್ಮಿಕೊಂಡಿರುವ ಬಗ್ಗೆ.

**ಟಿಪ್ಪಣಿ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕಲ್ಯಾಣ ಶಾಖೆಯ ಕೇಂದ್ರ ಕಛೇರಿಯಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದವರಿಗೆ, ಮಹಿಳೆಯವರಿಗೆ ಹಾಗೂ ಸಾಮಾನ್ಯ ವರ್ಗದವರಿಗೆ 2007–08ನೇ ಸಾಲಿನಲ್ಲಿ ವಿವಿಧ ಕಲ್ಯಾಣ ಕಾರ್ಯಕ್ರಮಗಳು ಹಾಗೂ ಯೋಜನೆಗಳನ್ನು ಹಮ್ಮಿಕೊಂಡು ಈ ಕೆಳಕಂಡಂತೆ ಅನುಷ್ಠಾನಗೊಳಿಸಿದೆ.

**1) ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಹಾಯಧನ:–**

ಕೇಂದ್ರ ಲೋಕ ಸೇವಾ ಆಯೋಗ, ಕರ್ನಾಟಕ ಲೋಕ ಸೇವಾ ಆಯೋಗ ಹಾಗೂ ಇತರೆ ಮಂಡಳಿಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷೆ ಪೂರ್ವ ತರಬೇತಿಯನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವರ್ಗದ ಅಭ್ಯರ್ಥಿಗಳಿಗೆ ನೀಡುವ ಸಲುವಾಗಿ 2007–08ನೇ ಸಾಲಿನಲ್ಲಿ ವಿವಿಧ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿತ್ತು. ಜಂಟಿ ಆಯುಕ್ತರು (ಕಲ್ಯಾಣ) ಇವರ ಕಛೇರಿಯ ಸಂಖ್ಯೆ:ಕ.ಅ./ಸಿ4/ಪಿ.ಆರ್.817/07–08 ದಿನಾಂಕ:31–01–2008ರಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಈ ಕೆಳಕಂಡ 3 ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಿರುತ್ತಾರೆ.

1) ಮೆ॥ ಮಾರ್ಗದರ್ಶಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆ, ಕನಕನಗರ, ಬೆಂಗಳೂರು – 32.
2) ಮೆ॥ ಯೂನಿವರ್ಸಲ್ ಕೋಚಿಂಗ್ ಸೆಂಟರ್, ವಿಜಯನಗರ, ಬೆಂಗಳೂರು – 40.
3) ಮೆ॥ ಯೂನಿವರ್ಸಲ್ ಚಾರಿಟಬಲ್ ಸೆಂಟರ್, ವಿಜಯನಗರ, ಬೆಂಗಳೂರು – 40.

ತಾಂತ್ರಿಕ ಬಿಡ್ ಹಾಗೂ ಹಣಕಾಸು ಬಿಡ್‌ಗಳಲ್ಲಿ ಸಫಲರಾದ ಮೆ॥ ಯೂನಿವರ್ಸಲ್ ಕೋಚಿಂಗ್ ಸೆಂಟರ್ ಸಂಸ್ಥೆಯನ್ನು ಆಯ್ಕೆ ಮಾಡಿ 2007–08ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಅರ್ಹ ಅಭ್ಯರ್ಥಿಗಳಿಗೆ ತರಬೇತಿ ನೀಡಲು ವಿಶೇಷ ಆಯುಕ್ತರು (ಆಡಳಿತ) ಇವರ ಕಛೇರಿಯ ಸಂಖ್ಯೆ:ಕ.ಅ./ಸಿ4/ಪಿ.ಆರ್.817/07–08 ದಿನಾಂಕ:26–02–2008ರಲ್ಲಿ ಅಧಿಕೃತ ಜ್ಞಾಪನಾ ಪತ್ರ ಹೊರಡಿಸಿದೆ. ಈ ಆದೇಶದಲ್ಲಿ ವಿವಿಧ ವಿಷಯಗಳ ಪರೀಕ್ಷೆ ಪೂರ್ವ ತರಬೇತಿಗಳ ತರಬೇತಿ ಶುಲ್ಕದ ಮೊತ್ತದ ವಿವರಗಳನ್ನು ನಿಗದಿಪಡಿಸಲಾಗಿರುತ್ತದೆ.

ಕೇಂದ್ರ ಲೋಕ ಸೇವಾ ಆಯೋಗವು ನಡೆಸಿದ ಐ.ಎ.ಎಸ್/ಐ.ಪಿ.ಎಸ್ ಹುದ್ದೆಗಳ ಪೂರ್ವಭಾವಿ ಪರೀಕ್ಷೆ ಹಾಗೂ ಕರ್ನಾಟಕ ಲೋಕ ಸೇವಾ ಆಯೋಗವು ನಡೆಸಿದ ಸಹಕಾರ ಸಂಘಗಳ ನಿರೀಕ್ಷಕರ ಹುದ್ದೆಗಳ ಪರೀಕ್ಷೆ ಅಭ್ಯರ್ಥಿಗಳನ್ನು ಮೆ॥ ಯೂನಿವರ್ಸಲ್ ಕೋಚಿಂಗ್ ಸೆಂಟರ್, ಮಾರೇನಹಳ್ಳಿ, ಬೆಂಗಳೂರು – 40, ಸಂಸ್ಥೆಗೆ ಪ್ರಾಯೋಜಿಸಿ ತರಬೇತಿಯನ್ನು ಈ ಕೆಳಕಂಡಂತೆ ನೀಡಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ತರಬೇತಿಯ ವಿಷಯ | ತರಬೇತಿಯ ಸಂಸ್ಥೆಯ ಹೆಸರು | ತರಬೇತಿಗೆ ಪ್ರಾಯೋಜಿಸಲಾದ ಅಭ್ಯರ್ಥಿಗಳ ವಿವರ | | | ತರಬೇತಿ ಶುಲ್ಕ ಪಾವತಿಸಲಾದ ಮೊತ್ತ | |
|---|---|---|---|---|---|---|---|
| | | | ಪ.ಜಾ./ ಪ.ಪಂ | ಹಿಂ.ಅ.ಸಂ ವರ್ಗ | ಒಟ್ಟು | ಶೇ.18ರ ಅನುದಾನದಲ್ಲಿ | ಹಿಂ.ಅ.ಸಂ ಅನುದಾನದಲ್ಲಿ |
| 1 | ಐ.ಎ.ಎಸ್/ಐ.ಪಿ.ಎಸ್ ಹುದ್ದೆಗಳ ಪೂರ್ವಭಾವಿ ಪರೀಕ್ಷೆ | ಮೆ॥ ಯೂನಿವರ್ಸಲ್ ಕೋಚಿಂಗ್ ಸೆಂಟರ್, ಮಾರೇನಹಳ್ಳಿ, ಬೆಂಗಳೂರು – 40, | 108 | 50 | 158 | 12.42 | 5.75 |
| 2 | ಸಹಕಾರ ಸಂಘಗಳ ನಿರೀಕ್ಷಕರ ಹುದ್ದೆಗಳ ಪರೀಕ್ಷೆ | ಮೆ॥ ಯೂನಿವರ್ಸಲ್ ಕೋಚಿಂಗ್ ಸೆಂಟರ್, ಮಾರೇನಹಳ್ಳಿ, ಬೆಂಗಳೂರು – 40, | 29 | 74 | 103 | 3.70 | 9.44 |

2) <u>ಗಣಕಯಂತ್ರ ಸಾಫ್ಟ್‌ವೇರ್ ತರಬೇತಿ:–</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಳೆಯ ಮೂರು ವಲಯಗಳಾದ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಖಾಸಗಿ ಸಂಸ್ಥೆಗಳ ಸಹಯೋಗದೊಂದಿಗೆ ಒಟ್ಟು 25 ಗಣಕಯಂತ್ರ ತರಬೇತಿ ಕೇಂದ್ರಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ಅಲ್ಪ ಸಂಖ್ಯಾತ ವರ್ಗದ ಅಭ್ಯರ್ಥಿಗಳಿಗೆ ಗಣಕಯಂತ್ರ ಸಾಫ್ಟ್‌ವೇರ್ ತರಬೇತಿಯನ್ನು ನೀಡಲಾಗುತ್ತಿದೆ.

ಕಲ್ಯಾಣಾಧಿಕಾರಿಗಳ ಕಛೇರಿಯಿಂದ 2007–08ನೇ ಸಾಲಿನಲ್ಲಿ ಈ ಕೆಳಕಂಡಂತೆ ಅಭ್ಯರ್ಥಿಗಳನ್ನು ಪ್ರಾಯೋಜನೆ ಮಾಡಿದೆ.

| ಕ್ರ. ಸಂ | ವಾರ್ಡ್ ಸಂಖ್ಯೆ/ ಹೆಸರು | ಖಾಸಗಿ ಸಹಭಾಗಿತ್ವದೊಂದಿಗೆ ನಡೆಸಲಾಗುತ್ತಿರುವ ಸಂಸ್ಥೆಯ ಹೆಸರು | ತರಬೇತಿಗೆ ಪ್ರಾಯೋಜಿಸಲಾದ ಅಭ್ಯರ್ಥಿಗಳ ವಿವರ | | |
|---|---|---|---|---|---|
| | | | ಪ.ಜಾ/ ಪ.ಪಂ | ಹಿಂ.ಅ.ಸಂ | ಒಟ್ಟು |
| 1 | 1 – ಹೆಚ್.ಎಂಟಿ | ಮೆ॥ ಸಿನರ್ಜಿ ಕಂಪ್ಯೂಟರ್ ಎಜುಕೇಷನ್, ಗಂಗಾನಗರ, ಬೆಂಗಳೂರು. | 212 | 512 | 724 |
| 2 | 03 – ಯಶವಂತಪುರ | ಮೆ॥ ಸಿನರ್ಜಿ ಕಂಪ್ಯೂಟರ್ ಎಜುಕೇಷನ್, ಗಂಗಾನಗರ, ಬೆಂಗಳೂರು. | 195 | 445 | 640 |
| 3 | 14 – ನಾಗಪುರ | ಮೆ॥ ಸಿನರ್ಜಿ ಕಂಪ್ಯೂಟರ್ ಎಜುಕೇಷನ್, ಗಂಗಾನಗರ, ಬೆಂಗಳೂರು. | 172 | 451 | 623 |
| 4 | 21 – ಕೈಗಾರಿಕಾನಗರ | ಮೆ॥ ಸಿನರ್ಜಿ ಕಂಪ್ಯೂಟರ್ ಎಜುಕೇಷನ್, ಗಂಗಾನಗರ, ಬೆಂಗಳೂರು. | 68 | 232 | 300 |
| 5 | 24 – ಬಾಷ್ಯಂನಗರ | ಮೆ॥ ಸಿನರ್ಜಿ ಕಂಪ್ಯೂಟರ್ ಎಜುಕೇಷನ್, ಗಂಗಾನಗರ, ಬೆಂಗಳೂರು. | 138 | 162 | 300 |
| 6 | 27 – ಗಾಂಧೀನಗರ | ಮೆ॥ ಸಿನರ್ಜಿ ಕಂಪ್ಯೂಟರ್ ಎಜುಕೇಷನ್, ಗಂಗಾನಗರ, ಬೆಂಗಳೂರು. | 261 | 361 | 622 |

| | | | | | |
|---|---|---|---|---|---|
| 7 | 28 – ಕಬ್ಬನ್‌ಪೇಟೆ | ಮೆ॥ ಮ್ಯಾಕ್ರೋ ಸಾಫ್ಟ್‌ಟೆಕ್ ಲಿಮಿಟೆಡ್, ವಿಜಯನಗರ, ಬೆಂಗಳೂರು | 48 | 264 | 312 |
| 8 | 30 – ಎಸ್.ಕೆ.ಆರ್. ಮಾರ್ಕೆಟ್. | ಮೆ॥ ಮ್ಯಾಕ್ರೋ ಸಾಫ್ಟ್‌ಟೆಕ್ ಲಿಮಿಟೆಡ್, ವಿಜಯನಗರ, ಬೆಂಗಳೂರು | 200 | 383 | 583 |
| 9 | 33 – ವಿಜಯನಗರ | ಮೆ॥ ಸಿನರ್ಜಿ ಕಂಪ್ಯೂಟರ್ ಎಜುಕೇಷನ್, ಗಂಗಾನಗರ, ಬೆಂಗಳೂರು. | 57 | 243 | 300 |
| 10 | 34–ಆರ್.ಪಿ.ಸಿ. ಬಡಾವಣೆ (ಹಂಪಿನಗರ) | ಮೆ॥ ಸಿನರ್ಜಿ ಕಂಪ್ಯೂಟರ್ ಎಜುಕೇಷನ್, ಗಂಗಾನಗರ, ಬೆಂಗಳೂರು. | 240 | 500 | 740 |
| 11 | 46 – ಚಾಮರಾಜಪೇಟೆ | ಮೆ॥ ಸ್ಕ್ಯಾನ್ ಐ.ಟಿ. ಸಲ್ಯೂಷನ್ಸ್ ಪ್ರೈ.ಲಿ, ಜಯನಗರ, ಬೆಂಗಳೂರು. | 116 | 184 | 300 |
| 12 | 47 – ಧರ್ಮರಾಯಸ್ವಾಮಿ ದೇವಸ್ಥಾನ | ಮೆ॥ ಸ್ಕ್ಯಾನ್ ಐ.ಟಿ. ಸಲ್ಯೂಷನ್ಸ್ ಪ್ರೈ.ಲಿ, ಜಯನಗರ, ಬೆಂಗಳೂರು. | 127 | 595 | 722 |
| 13 | 50 – ವಿಶ್ವೇಶ್ವರ ಪುರ | ಮೆ॥ ಸಿನರ್ಜಿ ಕಂಪ್ಯೂಟರ್ ಎಜುಕೇಷನ್, ಗಂಗಾನಗರ, ಬೆಂಗಳೂರು. | 200 | 418 | 618 |
| 14 | 56 – ಗಣೇಶಮಂದಿರ | ಮೆ॥ ಸಿನರ್ಜಿ ಕಂಪ್ಯೂಟರ್ ಎಜುಕೇಷನ್, ಗಂಗಾನಗರ, ಬೆಂಗಳೂರು. | 154 | 459 | 613 |
| 15 | 57 – ಜೆ.ಪಿ.ನಗರ | ಮೆ॥ ಸ್ಕ್ಯಾನ್ ಐ.ಟಿ. ಸಲ್ಯೂಷನ್ಸ್ ಪ್ರೈ.ಲಿ,ಜಯನಗರ, ಬೆಂಗಳೂರು. | 148 | 464 | 612 |
| 16 | 61 – ಮಾವಳ್ಳಿ | ಮೆ॥ ಸಿನರ್ಜಿ ಕಂಪ್ಯೂಟರ್ ಎಜುಕೇಷನ್, ಗಂಗಾನಗರ, ಬೆಂಗಳೂರು. | 170 | 551 | 721 |
| 17 | 67 – ಕೋರಮಂಗಲ | ಮೆ॥ ಸಾಫ್ಟ್‌ಪ್ರೋ ಟೆಕ್ನಾಲಜೀಸ್, ವಿಜಯನಗರ, ಬೆಂಗಳೂರು. | 133 | 167 | 300 |
| 18 | 71 – ಆಸ್ಟಿನ್‌ಟೌನ್ | ಮೆ॥ ಸಾಫ್ಟ್‌ಪ್ರೋ ಟೆಕ್ನಾಲಜೀಸ್, ವಿಜಯನಗರ, ಬೆಂಗಳೂರು. | 184 | 116 | 300 |
| 19 | 75 – ಜೋಗುಪಾಳ್ಯ | ಮೆ॥ ಸಾಫ್ಟ್‌ಪ್ರೋ ಟೆಕ್ನಾಲಜೀಸ್, ವಿಜಯನಗರ, ಬೆಂಗಳೂರು. | 197 | 103 | 300 |
| 20 | 77 – ಸಂಪಂಗಿರಾಮನಗರ | ಮೆ॥ ಸ್ಕ್ಯಾನ್ ಐ.ಟಿ. ಸಲ್ಯೂಷನ್ಸ್ ಪ್ರೈ.ಲಿ,ಜಯನಗರ, ಬೆಂಗಳೂರು. | 236 | 496 | 732 |
| 21 | 78 – ವಸಂತನಗರ | ಮೆ॥ ಸಿನರ್ಜಿ ಕಂಪ್ಯೂಟರ್ ಎಜುಕೇಷನ್, ಗಂಗಾನಗರ, ಬೆಂಗಳೂರು. | 324 | 302 | 626 |
| 22 | 80 – ಭಾರತಿನಗರ | ಮೆ॥ ಸಾಫ್ಟ್‌ಪ್ರೋ ಟೆಕ್ನಾಲಜೀಸ್, ವಿಜಯನಗರ, ಬೆಂಗಳೂರು. | 174 | 548 | 722 |
| 23 | 82 – ಹೊಯ್ಸಳನಗರ | ಮೆ॥ ಸಾಫ್ಟ್‌ಪ್ರೋ ಟೆಕ್ನಾಲಜೀಸ್, ವಿಜಯನಗರ, ಬೆಂಗಳೂರು. | 297 | 249 | 546 |
| 24 | 85 – ಕಾವಲ್ ಭೈರಸಂದ್ರ | ಮೆ॥ ಸ್ಕ್ಯಾನ್ ಐ.ಟಿ. ಸಲ್ಯೂಷನ್ಸ್ ಪ್ರೈ.ಲಿ, ಜಯನಗರ, ಬೆಂಗಳೂರು. | 183 | 368 | 551 |
| 25 | 96 – ಹೆಬ್ಬಾಳ | ಮೆ॥ ಸಿನರ್ಜಿ ಕಂಪ್ಯೂಟರ್ ಎಜುಕೇಷನ್, ಗಂಗಾನಗರ, ಬೆಂಗಳೂರು. | 243 | 398 | 641 |
| | | ಒಟ್ಟು ಅಭ್ಯರ್ಥಿಗಳ ಸಂಖ್ಯೆ | **4477** | **8971** | **13448** |

2007–08ನೇ ಸಾಲಿನಲ್ಲಿ ತರಬೇತಿ ಹೊಂದಿದ/ತರಬೇತಿಯಲ್ಲಿರುವ ಅಭ್ಯರ್ಥಿಗಳ ತರಬೇತಿ ಶುಲ್ಕವನ್ನು ಶೇ.18ರ ಅನುದಾನದಲ್ಲಿ ಒಟ್ಟು ರೂ.167.23 ಲಕ್ಷಗಳು ಹಾಗೂ ಹಿಂದುಳಿದ ಅಲ್ಪ ಸಂಖ್ಯಾತರ ಅನುದಾನದಲ್ಲಿ ಒಟ್ಟು ರೂ.337.18 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

2007–08ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಖಾಸಗಿ ಸಂಸ್ಥೆಗಳ ಸಹಯೋಗದೊಂದಿಗೆ ಶೇ.50:50 ಮೂಲಭಂಡವಾಳದೊಂದಿಗೆ ಜಂಟಿಯಾಗಿ ಈ ಕೆಳಕಂಡಂತೆ ಒಟ್ಟು 5 ಗಣಕಯಂತ್ರ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಗಿರುತ್ತದೆ.

(ರೂ. ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ವಾರ್ಡ್ ಸಂಖ್ಯೆ ಮತ್ತು ಹೆಸರು | ಖಾಸಗಿ ಸಂಸ್ಥೆಯ ಹೆಸರು | ಪಾಲಿಕೆಯ ವೆಚ್ಚ |
|---|---|---|---|
| 1 | 30 – ಎಸ್. ಕೆ. ಆರ್. ಮಾರ್ಕೆಟ್ | ಮೆ॥ ಮ್ಯಾಕ್ರೋ ಸಾಫ್ಟ್‌ಟೆಕ್ ಲಿಮಿಟೆಡ್, ವಿಜಯನಗರ, ಬೆಂಗಳೂರು | ರೂ.4.22 |
| 2 | 78 – ವಸಂತನಗರ | ಮೆ॥ ಸಿನರ್ಜಿ ಕಂಪ್ಯೂಟರ್ ಎಜುಕೇಷನ್, ಗಂಗಾನಗರ, ಬೆಂಗಳೂರು | ರೂ.4.23 |
| 3 | 50 – ವಿಶ್ವೇಶ್ವರಪುರ | ಮೆ॥ ಸಿನರ್ಜಿ ಕಂಪ್ಯೂಟರ್ ಎಜುಕೇಷನ್, ಗಂಗಾನಗರ, ಬೆಂಗಳೂರು | ರೂ.4.23 |
| 4 | 57 – ಜೆ.ಪಿ.ನಗರ | ಮೆ॥ ಸ್ಯಾನ್ ಐ.ಟಿ. ಸಲ್ಯೂಷನ್ಸ್ ಪ್ರೈ.ಲಿ. ಜಯನಗರ, ಬೆಂಗಳೂರು | ರೂ.4.23 |
| 5 | 28 – ಕಬ್ಬನ್ ಪೇಟೆ | ಮೆ॥ ಮ್ಯಾಕ್ರೋ ಸಾಫ್ಟ್‌ಟೆಕ್ ಲಿಮಿಟೆಡ್, ವಿಜಯನಗರ, ಬೆಂಗಳೂರು | ರೂ.4.23 |
| | | ಒಟ್ಟು | ರೂ.21.14 |

### 3) ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆಯ ಯೋಜನೆ:-

ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆಯ 2006–07ನೇ ಸಾಲಿನ ಯೋಜನೆ ಅಡಿಯಲ್ಲಿ ನಿರುದ್ಯೋಗಿ ಯುವಕ/ಯುವತಿಯರಿಗೆ ಟಾಟಾ ಇಂಡಿಕಾ/ಮಾರುತಿ ವ್ಯಾನ್ ಟ್ಯಾಕ್ಸಿ ವಾಹನಗಳನ್ನು ಸಾಲದ ಮುಖಾಂತರ ನೀಡಲು ತೀರ್ಮಾನಿಸಲಾಗಿರುತ್ತದೆ. ಈ ತೀರ್ಮಾನದಂತೆ ಪ್ರತಿ ಫಲಾನುಭವಿಗೆ ಪಾಲಿಕೆಯಿಂದ ಸಹಾಯಧನ ರೂ.95,000.00ಗಳನ್ನು ಬಿಡುಗಡೆ ಮಾಡಲಾಗುತ್ತಿದೆ.

ಟಾಟಾ ಇಂಡಿಕಾ, ಮಾರುತಿ ವ್ಯಾನ್ ಟ್ಯಾಕ್ಸಿ ವಾಹನಗಳನ್ನು ನೀಡಲು ಮೆ॥ ಮಣಿಪಾಲ್ ಮೋಟಾರ್ಸ್ ಪ್ರೈ.ಲಿ., ಸ್ಯಾಂಕಿ ರಸ್ತೆ, ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು–20 ರವರಿಗೆ ಪರಿಶಿಷ್ಟ ಪಂಗಡದ ಒಟ್ಟು 413 ಹಾಗೂ ಹಿಂದುಳಿದ ಅಲ್ಪ ಸಂಖ್ಯಾತರ ವರ್ಗದ ಒಟ್ಟು 212 ಫಲಾನುಭವಿಗಳ ಪಟ್ಟಿಯನ್ನು ಕಳುಹಿಸಲಾಗಿರುತ್ತದೆ. ಈ ಯೋಜನೆಯಡಿಯಲ್ಲಿ ಮಾರುತಿ ವ್ಯಾನ್ ಟ್ಯಾಕ್ಸಿ ವಾಹನಗಳನ್ನು ಮೆ॥ ಬಿಮಲ್ ಆಟೋ ಏಜೆನ್ಸಿ, ಮಹದೇವಪುರ, ವೈಟ್ ಫೀಲ್ಡ್ ರಸ್ತೆ, ಬೆಂಗಳೂರು – 48 ಹಾಗೂ ಮೆ॥ ಪ್ರಥಮ ಮೋಟಾರ್ಸ್ ಪ್ರೈ ಲಿ., ಬೆಳಂದೂರು, ಬೆಂಗಳೂರು – 37 ರವರಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ 43 ಹಾಗೂ ಹಿಂದುಳಿದ ಅಲ್ಪ ಸಂಖ್ಯಾತ ವರ್ಗದ ಒಟ್ಟು 46 ಫಲಾನುಭವಿಗಳ ಪಟ್ಟಿಯನ್ನು ಕಳುಹಿಸಲಾಗಿರುತ್ತದೆ.

2005 – 06ನೇ ಸಾಲಿನ ಯೋಜನೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ನಿರುದ್ಯೋಗಿಗಳಿಗೆ ಮಾರುತಿ ವ್ಯಾನ್ ಟ್ಯಾಕ್ಸಿ ವಾಹನಗಳನ್ನು ನೀಡಲಾಗುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಸದರಿ ವಾಹನಗಳನ್ನು ನೀಡಲು ಪರಿಶಿಷ್ಟ ಪಂಗಡದ ಒಟ್ಟು 28 ಫಲಾನುಭವಿಗಳ ಪಟ್ಟಿಯನ್ನು ಮೆ॥ ಬಿಮಲ್ ಬಿಮಲ್ ಆಟೋ ಏಜೆನ್ಸಿ ಹಾಗೂ ಮೆ॥ ಪ್ರಥಮ ಮೋಟಾರ್ಸ್ ಪ್ರೈ ಲಿ. ಸಂಸ್ಥೆಗಳಿಗೆ ಕಳುಹಿಸಲಾಗಿರುತ್ತದೆ.

<u>ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆಯ ಯೋಜನೆ ಅಡಿಯಲ್ಲಿ 2007–08ನೇ ಸಾಲಿನಲ್ಲಿ ಈ ಕೆಳಕಂಡಂತೆ ಫಲಾನುಭವಿಗಳಿಗೆ ಸಹಾಯಧನವನ್ನು ಬಿಡುಗಡೆ ಮಾಡಿದೆ.</u>

(ರೂ. ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಯೋಜನೆಯ ವಿವರ | ಫಲಾನುಭವಿಗಳ ಸಂಖ್ಯೆ | | ಸಹಾಯ ಧನದ ವಿವರ | |
|---|---|---|---|---|---|
| | | ಪ.ಜಾ./ ಪ.ಪಂ. | ಹಿಂ.ಅ.ಸಂ ವರ್ಗ | ಶೇ.18ರ ಅನುದಾನದಲ್ಲಿ | ಹಿಂ.ಅ.ಸಂ. ವರ್ಗದ ಅನುದಾನದಲ್ಲಿ |
| 1 | ಟಾಟಾ ಇಂಡಿಕಾ/ ಮಾರುತಿ ವ್ಯಾನ್ ಟ್ಯಾಕ್ಸಿ ವಾಹನಗಳು | 278 | 174 | 264.10 | 165.30 |
| 2 | ಮಾರುತಿ ವ್ಯಾನ್ ಟ್ಯಾಕ್ಸಿ ವಾಹನಗಳು | 62 | - | 62.00 | - |
| 3 | ಆಟೋರಿಕ್ಷಾ ವಾಹನಗಳು | 18 | - | 9.00 | - |
| | **ಒಟ್ಟು** | **358** | **174** | **335.10** | **165.30** |

**4) <u>ಹಿರಿಯ ನಾಗರೀಕರಿಗೆ ಸೌಲಭ್ಯ ಕೇಂದ್ರ:-</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕಲ್ಯಾಣ ಇಲಾಖೆ ವತಿಯಿಂದ ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್ ರವರ ಸಹಭಾಗಿತ್ವದೊಂದಿಗೆ ಅಕ್ಕಿತಿಮ್ಮನಹಳ್ಳಿ, ಶಾಂತಿನಗರ, ಬೆಂಗಳೂರು ಇಲ್ಲಿರುವ ನಗರ ಪಾಲಿಕೆಯ ಶಿಶುವಿಹಾರ ಕೇಂದ್ರದ ಕಟ್ಟಡದಲ್ಲಿ ಹಗಲು ನಿರೀಕ್ಷಣಾ ಕೇಂದ್ರವನ್ನು ನಡೆಸಲಾಗುತ್ತಿದೆ.

ಈ ಕೇಂದ್ರದಲ್ಲಿ ಪ್ರತಿ ದಿನ ಹಿರಿಯ ನಾಗರೀಕರಿಗೆ ಉಚಿತವಾಗಿ ಮೆಡಿಕಲ್ ಹೆಲ್ತ್ ಚೆಕಪ್, ಯೋಗ, ಪ್ರಾರ್ಥನೆ, ಟಿ.ವಿ. ನೋಡಲು, ಲೈಬ್ರರಿ, ಟೈಲರಿಂಗ್, ಚಿತ್ರಕಲೆ, ಗೊಂಬೆಗಳನ್ನು ತಯಾರು ಮಾಡುವ ವಿಧಾನವನ್ನು ತಿಳಿಸಿ, ಮಧ್ಯಾಹ್ನದ ಊಟ, ಟೀ ಮತ್ತು ಇತರೆಗಳನ್ನು ನೀಡಲಾಗುತ್ತಿದೆ. ಈ ಕೇಂದ್ರದಲ್ಲಿ ಒಟ್ಟು [illegible] ಫಲಾನುಭವಿಗಳು ಪ್ರಯೋಜನೆ ಪಡೆಯುತ್ತಿದ್ದಾರೆ. ಈ ಸಂಬಂಧ 2007–08ನೇ ಸಾಲಿನಲ್ಲಿ ಸದರಿ ಸಂಸ್ಥೆಗೆ ಒಟ್ಟು ರೂ.3.89 ಲಕ್ಷಗಳನ್ನು ಪಾವತಿಸಿದೆ.

**5) <u>ಅಪರೆಲ್ ಟ್ರೈನಿಂಗ್ & ಡಿಸೈನ್ ಸೆಂಟರ್‌ಗಳನ್ನು ಪ್ರಾರಂಭಿಸಲು:-</u>**

ಭಾರತ ಸರ್ಕಾರದ ಜವಳಿ ಸಚಿವಾಲಯದಿಂದ ಪ್ರಾಯೋಜಿತವಾದ ಅಪೆರಲ್ ಎಕ್ಸ್‌ಪೋರ್ಟ್ ಪ್ರಮೋಷನ್ ಕೌನ್ಸಿಲ್‌ನಿಂದ ನಡೆಸಲಾಗುತ್ತಿರುವ ಅಪೆರಲ್ ಟ್ರೈನಿಂಗ್ & ಡಿಸೈನ್ ಸೆಂಟರ್ ಸಂಸ್ಥೆಯು

ಸಹಯೋಗದೊಂದಿಗೆ ಎರಡು ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲು ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:317/07–08 ದಿನಾಂಕ:22–01–2008ರಲ್ಲಿ ತೀರ್ಮಾನಿಸಿರುತ್ತಾರೆ.

ಹೊಲಿಗೆ ಶಿಕ್ಷಕಿಯರು/ಮೇಲ್ವಿಚಾರಕರು/ದುರಸ್ತಿಗಾರರಿಗೆ ಸಿದ್ದ ಉಡುಪು ತಯಾರಿಕಾ ತಂತ್ರಜ್ಞಾನದ ತರಬೇತಿ ನೀಡಲು ಪಶ್ಚಿಮ ವಲಯದಲ್ಲಿ ಒಂದು ತರಬೇತಿ ಕೇಂದ್ರ ಹಾಗೂ ತರಬೇತುದಾರರಿಗೆ ಸಿದ್ದ ಉಡುಪು ತಯಾರಿಕೆಯ ವಿವಿಧ ತರಬೇತಿಗಳನ್ನು ನೀಡಲು ರಾಜರಾಜೇಶ್ವರಿನಗರ ವಲಯದಲ್ಲಿ ಒಂದು ತರಬೇತಿ ಕೇಂದ್ರವನ್ನು ಪ್ರಾರಂಭಿಸಲಾಗುತ್ತಿದೆ.

ಈ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲು ಶೇ.18ರ ಅನುದಾನದಲ್ಲಿ ರೂ.32.00 ಲಕ್ಷಗಳನ್ನು ಹಾಗೂ ಮಹಿಳಾ ಕಲ್ಯಾಣ ಯೋಜನೆ ಅಡಿಯಲ್ಲಿ ರೂ. 28.00 ಲಕ್ಷಗಳನ್ನು ಒಟ್ಟು ರೂ. 60.00 ಲಕ್ಷಗಳನ್ನು 2007–08ನೇ ಸಾಲಿನಲ್ಲಿ ವೆಚ್ಚ ಮಾಡಲಾಗುತ್ತಿದೆ.

6) <u>ಮಹಿಳಾ ಹಕ್ಕುಗಳ ಕಾರ್ಯಾಗಾರ:–</u>

ದಿನಾಂಕ:08–03–2008ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಮಾನಸ ಮಹಿಳಾ ಸೇವಾ ಸಂಘ, ಎಸ್.ಆರ್.ನಗರ, ಬೆಂಗಳೂರು – 27 ಸಂಸ್ಥೆಯ ಸಹಭಾಗಿತ್ವದೊಂದಿಗೆ ಆರೋಗ್ಯ ಮತ್ತು ಮಹಿಳಾ ಹಕ್ಕುಗಳ ಕಾರ್ಯಾಗಾರದ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಕಾರ್ಯಕ್ರಮಕ್ಕಾಗಿ ಒಟ್ಟು ರೂ.1,00,201/–ಗಳನ್ನು ವೆಚ್ಚ ಮಾಡಲಾಗಿದೆ.

ಕಲ್ಯಾಣ ಶಾಖೆಯ ಕೇಂದ್ರ ಕಛೇರಿಯ ಕಲ್ಯಾಣಾಧಿಕಾರಿಗಳ ಕಛೇರಿಯಿಂದ 2007–08ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ ಯೋಜನೆಗಳು ಹಾಗೂ ಕಾರ್ಯಕ್ರಮಗಳಿಗೆ ಆಯ್ಕೆಯಾದ ಸಂಸ್ಥೆಗಳು, ಸವಲತ್ತು ಪಡೆದ ಫಲಾನುಭವಿಗಳ ಹಾಗೂ ಖರ್ಚು ಮಾಡಿರುವ ವೆಚ್ಚಕ್ಕೆ ಮಾನ್ಯ ಆಡಳಿತಗಾರರ ಅನುಮೋದನೆ ಕೋರಿ ಮಂಡಿಸಿರುವ ಆಯುಕ್ತರವರ ದಿನಾಂಕ:08/04/2008 ರ ಟಿಪ್ಪಣಿ.

<u>ತೀರ್ಮಾನ:</u> ಆಯುಕ್ತರವರ ದಿನಾಂಕ:08/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:15/05/2008 ರ ನಡವಳಿಗಳು**

**ವಿಷಯ ಸಂಖ್ಯೆ:108/2008-09**

Resurfacing to Kaverappa Layout. Shivajinagara Area. Dobespet, G.C.Colony, Old cementry road. Cunningham cross roads. Chandini Chowk area. Chick Bazar road in Ward No.78 ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Resurfacing to Kaverappa Layout. Shivajinagara Area. Dobespet. G.C.Colony. Old cementry road. Cunningham cross roads. Chandini Chowk area. Chick Bazar road in Ward No.78 ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ರವರು ದಿನಾಂಕ:16-01-2008 ರಂದು ಎರಡು ಲಕೋಟೆ ಪದ್ಧತಿಯ (ಅಲ್ಪಾವಧಿ ಟೆಂಡರ್ ಪ್ರಕಟಣೆ) ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ಗಳು ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಸಿ.ಪಿ.ಉಮೇಶ್, ಗುತ್ತಿಗೆದಾರರ ಟೆಂಡರ್‌ನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.71.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007-08ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ಅಂದಾಜಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು, ಟೆಂಡರ್‌ಗಿಟ್ಟ ಮೊಬಲಗು ರೂ.70,96,976.27 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಸಿ.ಪಿ.ಉಮೇಶ್, ರವರು ಶೇಕಡ 42.53% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ ಗುತ್ತಿಗೆದಾರರು ಸಂಧಾನದ ನಂತರ ಶೇಕಡ 28.59% ರಷ್ಟು ಹೆಚ್ಚುವರಿ ದರಗಳನ್ನು Negotiated Schedule-B ನಲ್ಲಿ ನಮೂದಿಸಿರುತ್ತಾರೆ. ಸದರಿ ದರಗಳನ್ನು ಸಂಧಾನದ ನಂತರ ತುಲನೆ ಮಾಡಿ ಪ್ರಸಕ್ತ ಸಾಲಿನ ದರಪಟ್ಟಿ (2007-08) ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಂತೆ ಬಿಟುಮಿನ್/ಸಿಮೆಂಟ್ ದರದ ವ್ಯತ್ಯಾಸವನ್ನು ಪರಿಗಣಿಸಿ ನಮೂದಿಸಿದ ದರಗಳಾದ ಶೇಕಡ 14.99% ರಷ್ಟು ಹೆಚ್ಚುವರಿ ದರಗಳು ಕಂಡು ಬಂದಿರುತ್ತದೆ ಮತ್ತು ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಪೂರ್ವ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶ ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.91,25,792.90 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/116/ಎಹೆಚ್‌ಡಿ/2002 ದಿನಾಂಕ: 29-08-2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಡಳಿತಗಾರ ರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಸಿ.ಪಿ.ಉಮೇಶ್, ರವರು 2007-08ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ದರಗಳನ್ನು ಬಿಟುಮಿನ್ / ಸಿಮೆಂಟ್‌ನ ವ್ಯತ್ಯಾಸದ ದರಗಳನ್ನು ಪರಿಗಣಿಸಿ ತುಲನೆ ಮಾಡಿದಾಗ ಬಂದಂತಹ ಶೇಕಡ 14.99 ರಷ್ಟು ಹೆಚ್ಚುವರಿ ದರಗಳು ಅಥವಾ ರೂ.91,25,792.90 (ರೂ.ತೊಂಭತ್ತೊಂದು ಲಕ್ಷದ ಇಪ್ಪತ್ತೈದು ಸಾವಿರದ ಏಳುನೂರ ತೊಂಭತ್ತೆರಡು ಮತ್ತು ಪೈಸೆ ತೊಂಬತ್ತು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:05/05/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:05/05/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/06/2008 ರ ನಡವಳಿಗಳು**

**ವಿಷಯ ಸಂಖ್ಯೆ:213/2008–09**

ಸುಜಾತ ಚಿತ್ರಮಂದಿರ ಬಳಿ ಪಾದಚಾರಿ ಸುರಂಗ ಮಾರ್ಗದ ಕಾಮಗಾರಿಯ ಮಾರ್ಪಡಿತ ಅಂದಾಜು ಪಟ್ಟಿ ಅನುಮೋದನೆ ಬಗ್ಗೆ.

**ಪ್ರಸ್ತಾವನೆ:**

ಸುಜಾತ ಚಿತ್ರಮಂದಿರ ಬಳಿ ಪಾದಚಾರಿ ಸುರಂಗ ಮಾರ್ಗದ ಕಾಮಗಾರಿಯ ಅಂದಾಜು ದರಪಟ್ಟಿಯ ಮೊತ್ತ ರೂ.62.70 ಲಕ್ಷಗಳಿಗೆ 2003–04 ರಂತೆ ತಯಾರಿಸಿ ಮಂಜೂರಾತಿ ಪಡೆದಿದ್ದು, ಸದರಿ ಕಾಮಗಾರಿಯನ್ನು ಕರ್ನಾಟಕ ಭೂಸೇನಾ ನಿಗಮ ರವರಿಗೆ ಪಾರದರ್ಶಕ ಕಾಯ್ದೆ ಅಡಿಯಲ್ಲಿ ಕಾಮಗಾರಿ ನಿರ್ವಹಿಸಲು ವಹಿಸಿದ್ದು, ಕಾಮಗಾರಿಯನ್ನು ಪೂರ್ಣವಾಗಿ ನಿರ್ವಹಿಸಿರುತ್ತಾರೆ ಎಂದು ಕಾರ್ಯಪಾಲಕ ಅಭಿಯಂತರರು (ಯೋಜನೆ–ಪಶ್ಚಿಮ) ರವರು ವರದಿ ಮಾಡಿರುತ್ತಾರೆ.

ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಮೂಲ ಅಂದಾಜು ಪಟ್ಟಿಯಲ್ಲಿ ಕೆಲವು ಮಾರ್ಪಾಡುಗಳನ್ನು ಸ್ಥಳಕ್ಕೆ ಅನುಗುಣವಾಗಿ ಮಾರ್ಡಡಿಸಿ ಕೆಲಸ ನಿರ್ವಹಿಸಿದ್ದು, ಮಂಜೂರಾತಿ ದೊರೆಯದ ಕೆಲವು ಅಂಶಗಳ ಕಾಮಗಾರಿಗಳು ಜರೂರಾಗಿ ಮಾಡಲೇಬೇಕಾದ ಕಾರಣದಿಂದ ಮಾರ್ಪಡಿತ ಅಂದಾಜು ಪಟ್ಟಿಯ ಮಂಜೂರಾತಿ ನಿರೀಕ್ಷಿಸಿ ಕಾಮಗಾರಿಯನ್ನು ಸಂಪೂರ್ಣವಾಗಿ ಪೂರ್ಣಗೊಳಿಸಲಾಗಿರುತ್ತದೆ. ಈ ಮಾರ್ಪಾಡು ಅಂದಾಜು ಮೊತ್ತವಾದ ರೂ.51,00,000/– ಗಳ ಮೂಲ ಅಂದಾಜು ಪಟ್ಟಿಯ ಒಳಗಡೆ ಇದ್ದು ಇದರಿಂದ ಪಾಲಿಕೆಗೆ ಒಟ್ಟು ಮೊತ್ತ ರೂ.11,70,000/– ಗಳು ಉಳಿತಾಯವಿದ್ದು, ಈ ಕ್ರಮದಿಂದ ಪಾಲಿಕೆಗೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ. ಮುಖ್ಯ ಅಭಿಯಂತರರು (ಯೋಜನೆ–1) ರವರು ಮಾರ್ಪಡಿತ ಅಂದಾಜು ಪಟ್ಟಿಗೆ ಅನುಮೋದನೆ ಕೋರಿದ್ದು ಪ್ರಸ್ತಾವನೆಗೆ ಮಾನ್ಯ ಆಯುಕ್ತರು ಒಪ್ಪಿಗೆ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮಾನ್ಯ ಆಯುಕ್ತರವರ ಕಛೇರಿಗೆ ತಿಳಿಸಿದಂತೆ ಸದರಿ ಮಾರ್ಪಾಡು ಅಂದಾಜು ಮೊತ್ತ ರೂ.51,00,000/– ಗಳಿಗೆ ಆರ್ಥಿಕದತ್ತವಾದ ಅಧಿಕಾರ ಮಾನ್ಯ ಆಡಳಿತಗಾರರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ನಿರ್ವಹಣೆಯಲ್ಲಿ ಆಗಿರುವ ವರ್ಕ್‌ಸ್ಲಿಪ್ ಮೊತ್ತ ರೂ.3,46,528.77 ಮತ್ತು ಇ.ಐ.ಆರ್.ಎಲ್. ಮೊತ್ತ ರೂ.6,24,786.18 ಗಳಿಗೆ ಹಾಗೂ ಮಾರ್ಪಾಡು ಅಂದಾಜು ಪಟ್ಟಿಯ ಮೊತ್ತ ರೂ.51.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:02/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:02/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು